ಸಾಕ್ಷಿಯನ್ನು ಈ ದಿನ ದಿನಾಂಕ **20.08.2025** ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್ ಸಿ ಎಲ್ ವಕೀಲರಿಂದ ಶ್ರೀ ಎ ಎಲ್ ಎಚ್ ವಕೀಲರ ಪರವಾಗಿಃ ಪ್ರತಿವಾದಿಯ ಪರವಾಗಿ**

ನಾನು ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣಪತ್ರದಲ್ಲಿ ಹೇಳಿರುವ ವಿಷಯಗಳು ಸತ್ಯವಿರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ನಾನು ಕಿಸಾನ್ ಮಿತ್ರ ಎಂಟರಪ್ರೈಸಸ್ ಮತ್ತು ವಾದಿ ಬ್ಯಾಂಕನ ವಿರುದ್ದ ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ವೇದಿಕೆಯಲ್ಲಿ ಸಲ್ಲಿಸಿರುವ ದೂರು, ಸದರಿ ದೂರಿನಲ್ಲಿ ವಾದಿ ಬ್ಯಾಂಕ ಮೂರನೇ ಎದುರುದಾರರಾಗಿ ಸಲ್ಲಿಸಿರುವ ತಕರಾರು ಮತ್ತು ಸದರಿ ದೂರಿನ ಆರ್ಡರಶೀಟನ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಡಿ-**1** ರಿಂದ ನಿಡಿ-**3** ಎಂದು ಗುರುತಿಸಲಾಯಿತು.

ಪ್ರೊಜೆಕ್ಟ ರಿಪೋರ್ಟ ಎಸ್ಟಿಮೇಶನ, ನಾನು ಬ್ಯಾಂಕಗೆ ಬರೆದಿರುವ ಪತ್ರ, ಎರಡು ಸರ್ಟಿಫಿಕೇಟಗಳು ಮತ್ತು ಟ್ಯಾಕ್ಸ ಇನವೈಸ್ ದಾಖಲೆಗಳ ನಕಲುಗಳನ್ನು ಹಾಜರು ಪಡಿಸಿರುತ್ತೇನೆ. (ಸದರಿ ದಾಖಲೆಗಳು ಜರಾಕ್ಸ ನಕಲುಗಳಾಗಿರುವ ಕಾರಣ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ).

ಕಿಸಾನ್ ಮಿತ್ರ ಎಂಟರಪ್ರೈಸಸನವರು ನನಗೆ ಕಳುಹಿಸಿರುವ ವಕೀಲರಿಗೆ ನೋಟಿಸ್ಸಿಗೆ ನಾನು ನೀಡಿರುವ ಉತ್ತರದ ಕಚೇರಿ ನಕಲು ಮತ್ತು ಸದರಿ ಉತ್ತರವನ್ನು ಕಳುಹಿಸಿರುವ ಬಗ್ಗೆ ಅಂಚೆ ಸ್ವೀಕೃತಿ ಪತ್ರವನ್ನು ಹಾಜರು ಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಡಿ-**4** ಮತ್ತು ನಿಡಿ-**5** ಎಂದು ಗುರುತಿಸಲಾಯಿತು. ನಾನು ವಕೀಲರ ಮೂಲಕ ನಿಡಿ-**1** ದೂರಿನ ಎದುರುದಾರರಿಗೆ ಕಳುಹಿಸಿರುವ ವಕೀಲರ ನೋಟಿಸ್ಸು,

ಸದರಿ ನೋಟಿಸ್ಸು ಕಳುಹಿಸಿರುವ ಬಗ್ಗೆ ಅಂಚೆ ರಶೀದಿಗಳು ಮತ್ತು ಎರಡು ಅಂಚೆ ಸ್ವೀಕೃತಿ ಪತ್ರಗಳ ನಕಲುಗಳನ್ನು ಹಾಜರು ಪಡಿಸಿರುತ್ತೇನೆ. (ಸದರಿ ದಾಖಲೆಗಳು ಜರಾಕ್ಸ ನಕಲುಗಳಾಗಿರುವ ಕಾರಣ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ).

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.